ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, 5th March 1970.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. D. KOTHAVALE) in the Chair.

Reported statement of the Union Minister for Irrigation *re* : the stoppage of all works under the Cauvery Basin

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನಿನ್ನೆ ಕಾವೇರಿ ವಿಷಯದಲ್ಲಿ ಕೇಂದ್ರ ಸರ್ಕಾರದಿಂದ ಏನು ಸೂಚನೆ ಬಂದಿದೆ ಎನ್ನುವುದನ್ನು ಪ್ರಸ್ತಾಪಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಸರಿಯಾದ ತಿಳುವಳಿಕೆ ನೀಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡಿದ್ದೆ. ಇವತ್ತು ಸರ್ಕಾರ ಏನು ಮಾಡುತ್ತಿದೆಯೆಂಬ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸಭೆ ನಡೆಯುವ ಕಾಲದಲ್ಲಿ ಸರ್ಕಾರ ಏನು ಮಾಡಬಹುದು ಎನ್ನುವ ಸೂಚನೆಯನ್ನು ಈ ಸಭೆ ತಿಳಿದುಕೊಳ್ಳುವ ಮುನ್ನ ಬೇರೆಕಡೆ ಆ ವಿಷಯ ಪರೋಕ್ಷವಾಗಿಯಾಗಲೀ, ಅಥವಾ ಪ್ರತ್ಯಕ್ಷವಾಗಿಯಾಗಲೀ ಬರುವುದು ಒಳ್ಳೆಯ ಪದ್ಧತಿಯಲ್ಲ. ಇಲ್ಲಿ ಇವತ್ತು ರಾಜ್ಯದ ಹಿತಕ್ಕೆ ಧಕ್ಕೆ ಬರುವ ಒಂದು ಕ್ರಮ ಪ್ರಾರಂಭವಾಗಿರತಕ್ಕದ್ದು ಬೇರೆ ದುರ್ದೈವದ ಸಂಗತಿಯಾಗಿದೆ. ಇವತ್ತು, ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಸರ್ಕಾರದ ಪರವಾಗಿ ಏನು ನಿಲುವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದು ನಮ್ಮ ಹಕ್ಕು, ಅದು ಈ ಸಭೆಗೆ ಪ್ರಥಮತಃ ಇದೆ. ಪತ್ರಿಕೆಗಳಲ್ಲಿ ವರದಿಯಾಗುವುದಕ್ಕೆ ಮುಂಚೆ ಇದು ಪಾಲಸಿ ಮ್ಯಾಟರ್ ಆಗಿರುವುದರಿಂದ ನಮ್ಮ ರಾಜ್ಯದ ನಿಲುವು ಇದರಲ್ಲಿ ಏನೆಂಬುದನ್ನು ಪ್ರಥಮತಃ ತಿಳಿದುಕೊಳ್ಳುವುದಕ್ಕೆ ಈ ಸಭೆಗೆ ಹಕ್ಕು ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—I shall just convey the request to the Chief Minister and leave it to him to make a statement if he considers necessary. But no useful purpose is served by making a speech when the Hon. Chief Minister is not here.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇಲ್ಲಿ ಮಾತನಾಡುವುದಕ್ಕೆ ಮುಂಚೆ ಕೆಲವು ಅಂಶಗಳು ಪತ್ರಿಕೆಗಳಲ್ಲಿ ಬಂದರೆ, ಅವಕ್ಕೆ ಈ ಸಭೆಯ ಜವಾಬ್ದಾರಿಯೂ ಇದೆಯೆಂದು ನಾನು ತಿಳಿದುಕೊಳ್ಳುತ್ತೇನೆ.

---

† Indicates that the remarks or speeches have not been revised by the member concerned.

Mr. SPEAKER.—I have gone through the press reports. Hon. Chief Minister has not made any such policy statement.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ದಿನ ಬೆಳಿಗ್ಗೆ ಪತ್ರಿಕೆಯನ್ನು ಓದಿದ ತಕ್ಷಣ ಕಾವೇರಿ ನೀರಿನ ವಿಷಯದಲ್ಲಿ ಕೇಂದ್ರ ಸರ್ಕಾರದವರು ಅವರ ನಿಲುವನ್ನು ಮತ್ತು ಮದ್ರಾಸ್ ಸರ್ಕಾರದವರು ಅವರ ನಿಲುವನ್ನು ತೆಗೆದುಕೊಳ್ಳುವಾಗ, ನಮ್ಮ ನಿಲುವು ಅದರ ಬಗ್ಗೆ ಏನು ಎಂಬುದನ್ನು ನಾವು ಮಾನ್ಯ ಮುಖ್ಯಮಂತ್ರಿಗಳಿಂದ ಈಗ ತಿಳಿದುಕೊಳ್ಳಬೇಕು.

Mr. SPEAKER.—I have gone through the papers. I do not think any such statement has been made by the Chief Minister, or any other Minister.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ನನಗೆ ಕೆಲವು ಪ್ರಶ್ನೆಗಳನ್ನು ವಿವರಗಳಿಗಾಗಿ ಕೇಳುವುದಕ್ಕೆ ತಾವು ಅವಕಾಶವನ್ನು ಕೊಡಬೇಕೆಂದು ಕೇಳುತ್ತೇನೆ.

Mr. SPEAKER.—I have already stated that I will ask the Chief Minister to make a statement. Sri G. M. Manjunathaiah may begin the debate.

BUDGET ESTIMATES FOR 1970-71

General Discussion

(Debate continued)

ಶ್ರೀ ಜಿ. ಎಂ. ಮಂಜುನಾಥಯ್ಯ (ಸೋಮವಾರಪೇಟೆ).—ಅಧ್ಯಕ್ಷರೇ, ಈ ವರ್ಷದ ಬಜೆಟ್‌ನ್ನು ವಿರೋಧಿಸುತ್ತಾ ನನ್ನ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಈಗ ಸುಮಾರು 22 ವರ್ಷಗಳಿಂದಲೂ ನಮಗೆ ಸ್ವಾತಂತ್ರ್ಯ ಬಂದಲಾಗಾಯಿತು ಸೋಷಿಯಾಲಿಸ್ಟಿಕ್ ಸ್ಯಾಟ್ರನ್ ಮೇಲೆ ಈ ಒಂದು ಬಡ್ಜೆಟ್ಟನ್ನು ಮಂಡಿಸುತ್ತಿದ್ದಾರೆ. ಇಷ್ಟರವರೆಗೂ ಆಗಿರತಕ್ಕಂಥ ಲಕ್ಷ್ಯವನ್ನು ತೆಗೆದು ಕೊಂಡರೆ ನಾವು ಈ ತರಹದ ಬಡ್ಜೆಟ್ಟನ್ನು ಬದಲಾಯಿಸಬೇಕಾದ ಅಗತ್ಯ ಇದೆ ಎನ್ನುವುದು ನಮಗೆ ಮನದಟ್ಟಾಗುತ್ತದೆ. ಯಾವಾಗಲೂ ಒಂದು ದೇಶ ಮುಂದುವರಿಯಬೇಕಾದರೆ ಉದಾಹರಣೆಗೆ ವೆಸ್ಟ್ ಜರ್ಮನಿ, ಜಪಾನ್ ತೆಗೆದುಕೊಂಡರೆ ಅದು ಸೋಷಿಯಾಲಿಸ್ಟಿಕ್ ಪ್ಯಾಟ್ರನ್‌ನಿಂದ ಅಲ್ಲ ಪ್ರೈವೇಟ್ ಎಂಟರ್‌ಪ್ರೈಸ್‌ನಿಂದಾಗಿ ಮುಂದಕ್ಕೆ ಹೋಗುವುದು ಸಾಧ್ಯ ಇದೆ ಎಂದು ನಮಗೆ ಮನವರಿಕೆಯಾಗುತ್ತೆ. ನಮ್ಮ ದೇಶದಲ್ಲೂ ನಾವು ಸೋಷಿಯಾಲಿಸಮ್ ಕಾರ್ಯಗತ ಮಾಡಬೇಕಾದರೆ ನಮ್ಮ ದೇಶದಲ್ಲಿ ಮೊದಲು ವೆಲ್ತ್ wealth ಉಂಟುಮಾಡಬೇಕಾಗಿದೆ. ವೆಲ್ತ್ ಬಂದನಂತರ, ನಮ್ಮ ದೇಶ ಸುಭಿಕ್ಷವಾದ ನಂತರ ಸೋಷಿಯಾಲಿಸ್ಟಿಕ್ ಅಭ್ಯಾಸ ಮಾಡಬೇಕು. ಅಲ್ಲಿಯವರೆಗೂ ಅಂದರೆ ದೇಶದಲ್ಲಿ ವೆಲ್ತ್ ತುಂಬುವವರೆಗೂ ನಮ್ಮ ದೇಶದ ಪ್ರತಿಯೊಂದು ಭಾಗವೂ ಮುಂದುವರಿದು ಹೋಗಬೇಕಾಗುತ್ತದೆ. ಮುಂದುವರಿಯುವುದಕ್ಕೆ ಅವಕಾಶ ಮಾಡಿಕೊಡಬೇಕಾದರೆ ಪ್ರೈವೇಟ್ ಎಂಟರ್‌ಪ್ರೈಸನ್ನು ಬಲಪಡಿಸಬೇಕು ಎಂದು ಹೇಳಬೇಕಾಗಿದೆ. ಇನ್ನೊಂದು ಉದಾಹರಣೆಗಾಗಿ ಎಂ. ಎಸ್. ಆರ್. ಟಿ. ಸಿ. ವಿಚಾರ ತೆಗೆದುಕೊಳ್ಳೋಣ. ಜನತೆಯ ಹಿತದೃಷ್ಟಿಯಿಂದ ಈ ಎಂ. ಎಸ್. ಆರ್. ಟಿ. ಸಿ. ನ್ಯಾಷನಲೈಸೇಷನ್ ಆದಮೇಲೆ ಜನತೆಗೆ ಸುಖ ಸಿಕ್ಕಿದೆಯೇ ಎಂದು ನೋಡುವುದಾದರೆ, ಬಸ್ಸಿನಲ್ಲಿ ಪ್ರಯಾಣ ಮಾಡುವವರಿಗೆ ಮೊದಲಗಿಂತಲೂ ಹೆಚ್ಚು ಸುಖ ಸಿಕ್ಕಿದ್ದರೆ ಈ ಬಸ್ ರಾಷ್ಟ್ರೀಕರಣಕ್ಕೆ ಅವರು ಬೆಂಬಲ ಕೊಡುತ್ತಿದ್ದರು. ಆದರೆ ಈಪೊತ್ತಿನ ದಿವಸ ಬಸ್‌ನಲ್ಲಿ ಪ್ರಯಾಣ ಮಾಡುವಂಥ ಪ್ರತಿಯೊಬ್ಬ ಮನುಷ್ಯನನ್ನು ಕೇಳಿದರೂ ಕೂಡ ನಾವು ತೊಂದರೆಗೀಡಾಗಿದ್ದೇವೆ ಎಂದು ಹೇಳುತ್ತಾರೆಯೇ ಹೊರತು ನಾವು ಸುಖವಾಗಿದ್ದೇವೆ ಎನ್ನುವುದನ್ನು ಯಾರೂ ಹೇಳುವುದಿಲ್ಲ. ಈಗ ಬಂದಿರುವಂಥ ಅನುಭವದ ಮೇಲೆ ನಾವು ಮುಂದಿನ ಕಾರ್ಯವನ್ನು ರೂಪಿಸಿಕೊಳ್ಳಬೇಕಾಗಿದೆ. ಅದು ಏನೆಂದರೆ ಈ ನ್ಯಾಷನಲೈಸೇಷನ್ನು ಬಹಳಮಟ್ಟಿಗೆ ಕಡಿಮೆ ಮಾಡಬೇಕಾಗಿದೆ.